# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ-182 ಪದ್ಮನಾಭನಗರ, ಬೆಂಗಳೂರು

---

ಸಂ: ಸ.ಅ/ವಾ-182/ಪಿ.ಆರ್/06/2020-21 ದಿನಾಂಕ : 23-01-2021

## ವಾರ್ಡ್ ಸಮಿತಿಯ ಸಭೆಯ ನಡವಳಿಗಳು

**ವಿಷಯ:-** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ :ಬಿ12(58)ಪಿಆರ್/35/2020-21 ದಿನಾಕ :21-09-2020 ರವರ ಆದೇಶದಂತೆ ದಿನಾಂಕ :16-01-2021 ರಂದು ವಾರ್ಡ್ ಸಂಖ್ಯೆ-182 ಪದ್ಮನಾಭನಗರದ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

## ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು.

1) ಶ್ರೀ ನರಸಿಂಹಮೂರ್ತಿ ಜಂಟಿ ಆಯುಕ್ತರು ದಾಸರಹಳ್ಳಿ, ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿ.
2) ಶ್ರೀ ಶಿವಶಂಕರ್, ಸಹಾಯಕ ಅಭಿಯಂತರರು, ಬೆಸ್ಕಾಂ ಎಸ್-9 ಉಪ ವಿಭಾಗ.
3) ಶ್ರೀ ಶಂಕರ್ ಬಹದ್ದೂರ್ ಸಿಂಗ್, ಕಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ.
4) ಶ್ರೀ ಹರೀಶ್, ಉಪ ವಲಯ ಅರಣ್ಯಾಧಿಕಾರಿಗಳು, ಬಿ.ಬಿ.ಎಂ.ಪಿ.
5) ಶ್ರೀಮತಿ ಐಶ್ವರ್ಯ.ಬಿ.ಎ, ಸಹಾಯಕ ಅಭಿಯಂತರರು, ಬಿಡಬ್ಲ್ಯೂ.ಎಸ್.ಎಸ್.ಬಿ.
6) ಶ್ರೀ ಉಮೇಶ್, ಸಹಾಯಕ ಅಭಿಯಂತರರು, ಬಿ.ಬಿ.ಎಂ.ಪಿ ವಿಧ್ಯುತ್ ಉಪ ವಿಭಾಗ (ದಕ್ಷಿಣ).

ವಾರ್ಡ್ ಸಮಿತಿ ಸಂಚಾಲಕರು ಮತ್ತು ಸಹಾಯಕ ಅಭಿಯಂತರರು ಪದ್ಮನಾಭನಗರ ಬಡಾವಣೆ ವಾರ್ಡ್ ಸಂಖ್ಯೆ-182 ರವರಾದ ಶ್ರೀ ರಾಘವೇಂದ್ರ.ಟಿ ರವರು ಪ್ರಾರಂಭದಲ್ಲಿ ಉಪಸ್ಥಿತರಿದ್ದ ನೋಡೆಲ್ ಅಧಿಕಾರಿ ಮತ್ತು ವಾರ್ಡ್ ಸಮಿತಿಯ ಅಧ್ಯಕ್ಷರು ಮತ್ತು ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು.

| ಕ್ರ.ಸಂಖ್ಯೆ | ವಿಷಯ | ಷರಾ |
|---|---|---|
| 1 | ಬಿಬಿಎಂಪಿಯಿಂದ ನೇಮಿಸಿರುವ ಮಾರ್ಷಲ್‌ಗಳು ಕಸಕ್ಕೆ ಸಂಭಂದಿಸಿದ ಕೆಲಸಗಳನ್ನು ನಿರ್ವಹಿಸುತ್ತಿಲ್ಲ, ಕೇವಲ ಕೋವಿಡ್ ನಿಯಮ ಉಲ್ಲಂಘನೆಗಳ ದಂಡ ವಸೂಲಾತಿ ಕೆಲಸಗಳಲ್ಲಿ ತೊಡಗಿದ್ದು ಕಸದ ಸಮಸ್ಯಗೆ ಸಂಬಂದಿಸಿದಂತೆ ಕೆಲಸಗಳನ್ನು ನಿರ್ವಹಿಸಲು ಸೂಚಿಸುವಂತೆ ಸಭೆಯಲ್ಲಿ ನಿರ್ಣಯಿಸಲಾಯಿತು. | ಸ.ಕಾ.ನಿ.ಅ (ಘನ ತ್ಯಾಜ್ಯ) ರವರ ಕ್ರಮಕ್ಕಾಗಿ. |
| 2 | ಪದ್ಮನಾಭನಗರ 5ನೇ ಮುಖ್ಯರಸ್ತೆ, ಇಲ್ಲಿ UGD ಉಕ್ಕಿ ಹರಿದು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದಾಗಿ ಸ್ಥಳೀಯ ನಿವಾಸಿಗಳು ದೂರು ನೀಡಿರುತ್ತಾರೆ. | ಸ.ಕಾ.ನಿ.ಅ (BWSSB) ಸ.ಕಾ.ನಿ.ಅ (Major Road) ರವರ ಕ್ರಮಕ್ಕಾಗಿ. |
| 3 | ಲಕ್ಷ್ಮಿಕಾಂತ ಪಾರ್ಕ್ ಬಳಿ ವಿದ್ಯುತ್ ಕಂಬವು ಶಾರ್ಟ್ ಆಗುತ್ತಿದ್ದು ಸದರಿ ಸಮಸ್ಯಯನ್ನು ಬಗೆಹರಿಸಿಕೊಸಬೇಕಾಗಿ ಸದಸ್ಯರುಗಳು ಕೋರಿದರು ಹಾಗೂ ಗೌಡನಪಾಳ್ಯದಲ್ಲಿ 2 ವಿದ್ಯುತ್ ಕಂಬಗಳ ಸ್ಥಳಾಂತರ ಮಾಡಿಕೊಡಲು ಸಹ ಕೋರಿದರು. | ಸ.ಕಾ.ನಿ.ಅ/ ಸ.ಅ (Bescom) ರವರ ಕ್ರಮಕ್ಕಾಗಿ. |

Scanned by CamScanner

| | | |
|---|---|---|
| 4 | ರವಿ ಗ್ಯಾಸ್ ಏಜನ್ಸಿ ರಸ್ತೆಯಲ್ಲಿರುವ ಕತ್ತರಿಸಿದ ಮರದ ಕೊಂಬೆಗಳನ್ನು ತೆರವುಗೊಳಿಸಿಕೊಡಲು ಸದಸ್ಯರುಗಳು ಕೋರಿದರು. | ತೆರವುಗೊಳಿಸಲಾಗಿರುತ್ತದೆ. |
| 5 | ಎಎಸ್ಐ ಬನಶಂಕರಿ ಟ್ರಾಫಿಕ್ ಠಾಣೆ ರವರು ಮಾತನಾಡುತ್ತಾ ವಾರ್ಡ್ 182ರ ವ್ಯಾಪ್ತಿಯಲ್ಲಿ NO Parking ಫಲಕಗಳನ್ನು ಅಳವಡಿಸಿಕೊಡಲು ಕೋರಿದರು. | NO Parking ಫಲಕಗಳನ್ನು ಅಗತ್ಯವಿರುವ ಸ್ಥಳಗಳ ಪಟ್ಟಿಯನ್ನು ನೀಡಿದಲ್ಲಿ Traffic, Engineering Cell. BBMP ರವರಿಗೆ ಸಲ್ಲಿಸಿ ಹೊಸ NO Parking ಫಲಕಗಳನ್ನು ಅಳವಡಿಸಿಕೊಡಲಾಗುವುದು, ಅಥವಾ ಹಾಲಿ ಫಲಕಗಳಿದ್ದು ಬಿದ್ದು ಹೋಗಿದ್ದಲ್ಲಿ ಅವುಗಳನ್ನು ಅಳವಡಿಸಿಕೊಡಲಾಗುವುದು ಎಂದು ಸ.ಅ ವಾರ್ಡ್ 182 ರವರು ತಿಳಿಸಿದರು. |
| 6 | ಪದ್ಮನಾಭನಗರ 12ನೇ ಅಡ್ಡರಸ್ತೆ ಹಾಗೂ ಪುಟ್ಟಲಿಂಗಯ್ಯ ರಸ್ತೆಯಲ್ಲಿರುವ ರಾಜ್ ಕಟ್ಟ ಬಳಿಯ ಹಳೆಯ ಮರಗಳ ಕೊಂಬೆಗಳನ್ನು ತೆರವುಗೊಳಿಸಿಕೊಡುವಂತೆ ಸದಸ್ಯರು ಕೋರಿದರು. | ಉಪ ವಲಯ ಅರಣ್ಯಾಧಿಕಾರಿ ರವರ ಕ್ರಮಕ್ಕೆ. |

ಸಭೆಯಲ್ಲಿ ಇತರೆ ಯಾವುದೇ ವಿಷಯದ ಬಗ್ಗೆ ಪ್ರಸ್ತಾವನೆ ಮಾಡದಿದ್ದ ಕಾರಣ ನೋಡಲ್ ಅಧಿಕಾರಿ/ಅಧ್ಯಕ್ಷರ ಅಪ್ಪಣೆ ಮೇರೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ಸಂಚಾಲಕರು
ಹಾಗೂ ಸಹಾಯಕ ಅಭಿಯಂತರರು

ವಾರ್ಡ್ 182 ರ ನೋಡಲ್ ಅಧಿಕಾರಿ
ಹಾಗೂ ಜಂಟಿ ಆಯುಕ್ತರು, ದಾಸರಹಳ್ಳಿ ವಲಯ.

Scanned by CamScanner